1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Crl.R.P.28/2022

PW- 01

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಗಿರೀಶ್ |
| ತಂದೆ/ ಗಂಡನ ಹೆಸರು | : | ಜಯದೇವಯ್ಯ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಖಾಲಿ |
| ವಾಸ | : | ಕುಂಡದಹಳ್ಳಿ |

ಇಂದು ದಿ.13-08-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ದಂಡ ಪ್ರಕ್ರಿಯಾ ಸಂಹಿತೆ ಕಲಂ.391ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ದಿ.25-06-2025 ರಂದು ಪುರಸ್ಕರಿಸಿದ್ದು, ಸದರಿ ಆದೇಶದ ಪ್ರಕಾರ ಸಾಕ್ಷಿಯ ವಿಚಾರಣೆ.

**ಮುಖ್ಯ ವಿಚಾರಣೆಃ-** ಮೇಲ್ಮನವಿದಾರರ ಪರ ಶ್ರೀ ಕೆ ಜಿ ವಿ ವಕೀಲರಿಂದ.

ನಾನು ಮೇಲ್ಮನವಿಯಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಹಳದಮ್ಮದೇವಿ ಬಾಲಯರ ಪ್ರೌಢಶಾಲೆ , ಹೊನ್ನಾಳಿ ಇವರು 2022-23 ನೇ ಸಾಲಿನಲ್ಲಿ ಶಿಕ್ಷಕರ, ಸಿಬ್ಬಂದಿಗಳ ಮಾಹಿತಿ ನೀಡಬೇಕೆಂದು ದಿ.10-11-2022 ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ನೋಡುತ್ತಿದ್ದು , ನಿಪಿ.1 ಎಂದು ಗುರುತಿಸಲಾಯಿತು. ದಿ.24-11-2022 ರಂದು ಶ್ರೀ ಅಕ್ಕಮಹಾದೇವಿ ಆಂಗ್ಲ ಮಾಧ್ಯಮ ಶಾಲೆಗೆ 2015-16 ರಿಂದ 2021-22ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಶಿಕ್ಷಕರ ಬಗ್ಗೆ ಮಾಹಿತಿ ಕೇಳಿ ಸಲ್ಲಿಸಿದ ಅರ್ಜಿ ನೋಡುತ್ತಿದ್ದು , ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ದಿ.03-12-2022 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯವರು ನನಗೆ ಮಾಹಿತಿ ಹಕ್ಕಿನ ಅಡಿ ಕೇಳಿದ ಮಾಹಿತಿ ನೀಡಿದ್ದು , ಅದನ್ನು ನೋಡುತ್ತಿದ್ದು ನಿಪಿ.3 ಎಂದು ಗುರುತಿಸಲಾಯಿತು. ಕರ್ನಾಟಕ ಸರ್ಕಾರ 19-04-2018 ರಂದು ವೇತನ ಶ್ರೇಣಿಗಳ ಪರೀಕ್ಷರಣೆ ಮತ್ತು

ಇತರೆ ಸಂಬಂಧಿಸಿದ ಆದೇಶ ಹಾಜರುಪಡಿಸಿದ್ದು , ಅದನ್ನು ನೋಡುತ್ತಿದ್ದು , ನಿಪಿ.4 ಎಂದು ಗುರುತಿಸಲಾಯಿತು. ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಗೆ ಸಂಬಧಪಟ್ಟಂತೆ ಆನಲೈನ್ ಪ್ರತಿ ಹಾಜರುಪಡಿಸಿದ್ದು , ಮೂರು ಪುಟಗಳಿಂದ ಕೂಡಿದ್ದು , ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ದಿ.02-12-2022 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಹಿತಿ ಹಕ್ಕಿನಡಿ ಕೇಳಿದ ಮಾಹಿತಿ ಬಗ್ಗೆ ನನಗೆ ಉತ್ತರ ನೀಡಿದ್ದು , ಅದನ್ನು ನೋಡುತ್ತಿದ್ದು, ನಿಪಿ.6 ಎಂದು ಗುರುತಿಸಲಾಯಿತು. ಹೊನ್ನಾಳಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ನಂ.21/22 ಪ್ರಕರಣ ದಾಖಲು ದಾಖಲು ಮಾಡಿದ್ದರ ಬಗ್ಗೆ ಆದೇಶದ ಹಾಳೆಯ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಎದುರುದಾರರು ನನ್ನ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆ ಕಲಂ.125(3)ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಎಂ.ಸಿ.32/2021 ರ ಆದೇಶದ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ.9 ಎಂದು ಗುರುತಿಸಲಾಯಿತು. ಡಿಕ್ರಿ ಹಾಜರುಪಡಿಸಿದ್ದು, ಅದನ್ನು ನಿಪಿ.10 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ-** ಎದುರುದಾರರ ಪರ ಶ್ರೀ ಕೆ ಜಿ ಕೆ ಎಸ್ ವಕೀಲರಿಂದ.

ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು , ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.